ಕರ್ನಾಟಕ ಸರ್ಕಾರ

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ.

CHIKKABALLAPURA URBAN DEVELOPMENT AUTHORITY.

ಸಿಟ್ರಸ್ ಸಿಟಿ ಮೇಡೋಸ್, 4ನೇ ಸೆಕ್ಟರ್, ತುಮಕಲಹಳ್ಳಿ ಗ್ರಾಮ, ಚಿಕ್ಕಬಳ್ಳಾಪುರ-562101.

Email ID:cuda.cbpur@gmail.com ದೂರವಾಣಿ ಸಂಖ್ಯೆ:08156-274501.

ಸಂಖ್ಯೆ:ಚಿ.ನ.ಅ.ಪ್ರಾ/ವಿನ್ಯಾಸ/18/2023-24 /1056 ದಿನಾಂಕ: 15 MAR 2024

"ವಸತಿ ವಿನ್ಯಾಸ ನಕ್ಷೆ ಅಂತಿಮ ಅನುಮೋದನಾ ಪತ್ರ"

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಅಗಲಗುರ್ಕಿ ಗ್ರಾಮದ ಸ.ನಂ.150/11 ರಲ್ಲಿ 0ಎಕರೆ-10.04ಗುಂಟೆ ಹಾಗೂ ಸ.ನಂ.150/12 ರಲ್ಲಿ 0ಎಕರೆ-10.04ಗುಂಟೆ ಒಟ್ಟು 0ಎಕರೆ-20.08ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಹಾಗೂ ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ:

1. ಅರ್ಜಿದಾರರ ಮನವಿ ದಿನಾಂಕ:17.07.2023.
2. ದಿನಾಂಕ:29.09.2023 ರಂದು ನಡೆದ ಪ್ರಾಧಿಕಾರದ 32ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 19 ರ ನಿರ್ಣಯ.
3. ಪ್ರಾಧಿಕಾರದ ಆದೇಶ ಪತ್ರ ಸಂಖ್ಯೆ:ಚಿನಅಪ್ರಾ/ವಿನ್ಯಾಸ/18/2023-24 ದಿನಾಂಕ:03.11.2023.
4. ಅರ್ಜಿದಾರರು ವಿನ್ಯಾಸದಲ್ಲಿನ ಶೇ.100 ರಷ್ಟು ನಿವೇಶನಗಳನ್ನು ಬಿಡುಗಡೆಗಾಗಿ ಸಲ್ಲಿಸಿದ ಮನವಿ ದಿನಾಂಕ:19.01.2024
5. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಬಳ್ಳಾಪುರ ಉಪವಿಭಾಗ ಇವರ ಕಛೇರಿ ಪತ್ರ ಸಂಖ್ಯೆ:ಸಕಾಇ/ಲೋಇ/ಉವಿ/ಚಿಬಪು/ತಾಶಾ/ಸಿವಿಲ್ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ/2023-24/518 ದಿನಾಂಕ:09.01.2024
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಚಿಕ್ಕಬಳ್ಳಾಪುರ ರವರ ಪತ್ರ ಸಂಖ್ಯೆ:ಸಕಾಅ.ಗ್ರಾಕುನೀ ಮತ್ತು ನೈ ಉವಿ/ಚಿಪುರ/2023-24 ದಿನಾಂಕ:17.01.2024.
7. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರ ಪತ್ರ ಸಂಖ್ಯೆ:ಹಿಸತೋನಿ/ಜಿಪಂ/ಚಿಕ್ಕ/2023-24 ದಿನಾಂಕ:27.12.2023
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾ,ಕಾ ಮತ್ತು ಪಾ ನಗರ ಉಪವಿಭಾಗ, ಬೆ.ವಿ.ಕಂ, ಚಿಕ್ಕಬಳ್ಳಾಪುರ ಇವರ ಪತ್ರ ಸಂಖ್ಯೆ:ಸಕಾನಿಇಂ/ಸಇಂ/(ತಾ)/ನ.ಉ.ವಿ/2023-24/2765 ದಿನಾಂಕ:18.01.2024.
9. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಗಲಗುರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಇವರ ಪತ್ರ ಸಂಖ್ಯೆ:ಅ.ಗ್ರಾ.ಪಂ/ಧೃಪ/ನಂ.02/2023-24 ದಿನಾಂಕ:19.01.2024.
10. ದಿನಾಂಕ:20.01.2024 ರಂದು ನಡೆದ ಪ್ರಾಧಿಕಾರದ 33ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:55 ರ ನಿರ್ಣಯ.

--2

11. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಬಳ್ಳಾಪುರ ಉಪವಿಭಾಗ ಇವರ ಕಛೇರಿ ಪತ್ರ ಸಂಖ್ಯೆ:ಸಕಾಅ/ಲೋಇ/ಉವಿ/ಚಿಬಪು/ತಾಶಾ/ಕಟ್ಟಡ ರೇಖೆ/2023-24/681 ದಿನಾಂಕ:06.03.2024
12. ಅರ್ಜಿದಾರರು ಬರೆದುಕೊಟ್ಟಿರುವ ನೋಂದಾಯಿತ ಪರಿತ್ಯೇಜನ ಪ್ರಮಾಣ ಪತ್ರ ದಿನಾಂಕ:13.03.2024.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಲ್ಲಿ ಶ್ರೀ ರಾಜರಾಮ್ ಬಿನ್ ನರಸಿಂಹಮೂರ್ತಿ ಇವರು ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಅಗಲಗುರ್ಕಿ ಗ್ರಾಮದ ಸ.ನಂ.150/11 ರಲ್ಲಿ 0ಎಕರೆ-10.04ಗುಂಟೆ ಹಾಗೂ ಸ.ನಂ.150/12 ರಲ್ಲಿ 0ಎಕರೆ-10.04ಗುಂಟೆ ಒಟ್ಟು 0ಎಕರೆ-20.08ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಉಲ್ಲೇಖ(2) ರಲ್ಲಿ ಸದರಿ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17* ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಉಲ್ಲೇಖ(3) ರ ಪತ್ರದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಅಗಲಗುರ್ಕಿ ಗ್ರಾಮದ ಸ.ನಂ.150/11 ರಲ್ಲಿ 0ಎಕರೆ-10.04ಗುಂಟೆ ಹಾಗೂ ಸ.ನಂ.150/12 ರಲ್ಲಿ 0ಎಕರೆ-10.04ಗುಂಟೆ ಒಟ್ಟು 0ಎಕರೆ-20.08ಗುಂಟೆ ವಿಸ್ತೀರ್ಣದ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ(4) ರಲ್ಲಿ ಅರ್ಜಿದಾರರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಉಲ್ಲೇಖ(5) ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರು ಸದರಿ ಬಡಾವಣೆಯಲ್ಲಿ ಮುಖ್ಯ ರಸ್ತೆ, ಪಾದಚಾರಿ ಮಾರ್ಗ ಹಾಗೂ ಮಳೆ ನೀರು ಚರಂಡಿ ಸಿವಿಲ್ ಕಾಮಗಾರಿಗಳನ್ನು ಮಾಡಲಾಗಿರುತ್ತದೆ ಎಂದು ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ನೀಡಿರುತ್ತಾರೆ.

ಉಲ್ಲೇಖ(6) ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಚಿಕ್ಕಬಳ್ಳಾಪುರ ರವರ ಪತ್ರದಲ್ಲಿ ಸದರಿ ಬಡಾವಣೆಯಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಒಳ ಚರಂಡಿ ಕಾಮಗಾರಿಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾರೆಂದು ದೃಢೀಕರಣ ಪತ್ರ ನೀಡಿರುತ್ತಾರೆ.

ಉಲ್ಲೇಖ(7) ರಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರು ಸದರಿ ಬಡಾವಣೆಯಲ್ಲಿ ಅನುಮೋದಿತ ನಿವೇಶನದ ರಸ್ತೆ ಬದಿ ಗಿಡ ನೆಡುವ ಕಾರ್ಯಕ್ರಮ ಮತ್ತು ಉದ್ಯಾನವನ ಅಭಿವೃದ್ಧಿ ಕಾಮಗಾರಿ ಸಂಪೂರ್ಣವಾಗಿ ಅಭಿವೃದ್ಧಿಪಡಿಸಿರುವುದು ತೃಪ್ತಿಕರವಾಗಿ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ.

--3

ಉಲ್ಲೇಖ(8) ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ), ಬೆಸ್ಕಾಂ ಉಪವಿಭಾಗ, ಚಿಕ್ಕಬಳ್ಳಾಪುರ ಇವರು ಸದರಿ ಬಡಾವಣೆಗೆ ವಿದ್ಯುತ್ ಸರಬರಾಜು ಮಾಡಿರುವ ಬಗ್ಗೆ ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ.

ಉಲ್ಲೇಖ(9) ರಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಗಲಗರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ರವರ ಪತ್ರದಲ್ಲಿ ಸದರಿ ಬಡಾವಣೆಯಲ್ಲಿ ಬರುವ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆಂದು ತಿಳಿಸಿರುತ್ತಾರೆ.

ಉಲ್ಲೇಖ(10) ರಲ್ಲಿ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಪ್ರಶ್ನಿತ ಜಮೀನುಗಳಿಗೆ ಹಾಲಿ ಇರುವ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಗೆ ಅನುಗುಣವಾಗಿ ವಿಸ್ತರಿಸಿ ಅನುಮೋದನೆ ನೀಡುವ ಸಂಬಂಧ ಲೋಕೋಪಯೋಗಿ ಇಲಾಖೆಯಿಂದ ಮಾಹಿತಿ ಪಡೆದ ನಂತರ ಪ್ರಶ್ನಿತ ಜಮೀನುಗಳಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಹಾಗೂ ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಉಲ್ಲೇಖ(11) ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರು ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಅಗಲಗುರ್ಕಿ ಗ್ರಾಮದ ಸ.ನಂ.150/11 ಹಾಗೂ ಸ.ನಂ.150/12ರ ಜಮೀನ ಪಕ್ಕದಲ್ಲಿ ಹಾದು ಹೋಗುತ್ತಿರುವ ರಸ್ತೆಯು ಲೋಕೋಪಯೋಗಿ ಇಲಾಖೆಯ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಅಗಲಗುರ್ಕಿ ಗ್ರಾಮದ ಸ.ನಂ.150/11 ಹಾಗೂ ಸ.ನಂ.150/12ರ ಜಮೀನಿಗೆ ಜಿಲ್ಲಾ ಮುಖ್ಯ ರಸ್ತೆಯ ಮಧ್ಯ ಭಾಗದಿಂದ 13.0ಮೀಗಳ ಕಟ್ಟಡ ರೇಖೆಯನ್ನು ಕಾಪಾಡಬೇಕಾಗಿರುತ್ತದೆ ಹಾಗೂ ಈ ಪೈಕಿ 10.0ಮೀ ರಸ್ತೆ ಮಾರ್ಜಿನ್ ಮತ್ತು 3.0ಮೀ **Set Back Distance** ಆಗಿ ಪರಿಗಣಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಶ್ನಿತ ಜಮೀನುಗಳಿಗೆ ಹಾಲಿ ಇರುವ ಜಿಲ್ಲಾ ಮುಖ್ಯ ರಸ್ತೆಯ ಮಧ್ಯಭಾಗದಿಂದ 10.0ಮೀ ರಸ್ತೆ ವಿಸ್ತರಿಸಿ ಹಾಗೂ 3.0ಮೀ ಕಟ್ಟಡ ರೇಖೆಯನ್ನು ಅಳವಡಿಸಿ ವಿನ್ಯಾಸ ನಕ್ಷೆ ಸಿದ್ದಪಡಿಸಲಾಗಿರುತ್ತದೆ.

ಉಲ್ಲೇಖ(12) ರಲ್ಲಿ ವಸತಿ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ ಮತ್ತು ರಸ್ತೆಗಾಗಿ ಕಾಯ್ದಿರಿಸಿದ ಪ್ರದೇಶಗಳನ್ನು ಉಪನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ 1ನೇ ಪುಸ್ತಕದ ದಸ್ತಾವೇಜು ನಂಬರ ಸಿಕೆಬಿ-1-08184-2023-24 ಆಗಿ ದಿನಾಂಕ:13.03.2024 ರಂದು ನೋಂದಾಯಿತ ತಿದ್ದುಪಡಿ ಪರಿತ್ಯೇಜನ ಪತ್ರದ ಮೂಲಕ ನೋಂದಾಯಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಗಲಗುರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಇವರಿಗೆ ಹಸ್ತಾಂತರಿಸಿರುವುದಾಗಿ ತಿಳಿಸಿ, ನೋಂದಾಯಿತ ಪರಿತ್ಯೇಜನ ಪತ್ರದ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಆದ್ದರಿಂದ ಉಲ್ಲೇಖ (8) ಮತ್ತು (9)ರಂತೆ ಪ್ರಶ್ನಿತ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆಗೊಳಿಸಲು ಕ್ರಮವಹಿಸಿ, ಈ ಕೆಳಕಂಡಂತೆ ಆದೇಶಿಸಿದೆ.

--4

:ಆದೇಶ:

ಸಂಖ್ಯೆ:ಚಿ.ನ.ಅ.ಪ್ರಾ/ವಿನ್ಯಾಸ/18/2023-24 ದಿನಾಂಕ: 15 MAR 2024

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಅಗಲಗುರ್ಕಿ ಗ್ರಾಮದ ಸ.ನಂ.150/11 ರಲ್ಲಿ 0ಎಕರೆ-10.04ಗುಂಟೆ ಹಾಗೂ ಸ.ನಂ.150/12 ರಲ್ಲಿ 0ಎಕರೆ-10.04ಗುಂಟೆ ಒಟ್ಟು 0ಎಕರೆ-20.08ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2ಬಿ) ರನ್ವಯ ಈ ಕೆಳಕಂಡ ನಿಬಂಧನೆಗೊಳಪಟ್ಟು ಅನುಮೋದಿಸಿದೆ ಹಾಗೂ ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.

<u>ನಿಬಂಧನೆಗಳು:</u>

1. ಈ ದಿನಾಂಕದಿಂದ ಐದು ವರ್ಷಗಳವರೆಗೆ ಯಾವುದಾದರೂ ಕಾಮಗಾರಿಯಲ್ಲಿ ದೋಷಕಂಡುಬಂದಲ್ಲಿ ಅಥವಾ ದುರಸ್ಥಿಮಾಡಬೇಕಾದ ಸಂಧರ್ಭ ಬಂದಲ್ಲಿ ಭೂ ಮಾಲೀಕರು ತಮ್ಮ ಸ್ವಂತ ಖರ್ಚಿನಿಂದ ದುರಸ್ಥಿ ಮಾಡತಕ್ಕದ್ದು.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಬಳ್ಳಾಪುರ ಉಪವಿಭಾಗ ಇವರ ಕಛೇರಿ ಪತ್ರ ಸಂಖ್ಯೆ:ಸಕಾಇ/ಲೋಇ/ಉವಿ/ಚಿಬಪು/ತಾಶಾ/ಕಟ್ಟಡ ರೇಖೆ/2023-24/681 ದಿನಾಂಕ:06.03.2024 ರಂತೆ ಪ್ರಶ್ನಿತ ಜಮೀನುಗಳಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಸದರಿ ಪತ್ರಕ್ಕೆ ಸಂಬಂಧಿಸಿದಂತೆ ಈ ಇಲಾಖೆಯು ಜವಾಬ್ದಾರಿ ಆಗಿರುವುದಿಲ್ಲ.
3. ವಿನ್ಯಾಸದ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳಸತಕ್ಕದ್ದು.
4. ಸದರಿ ಬಡಾವಣೆಯ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಣೆ ನೀಡುವಾಗ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿದೆಂದು ಸ್ಪಷ್ಟವಾಗಿ ತಿಳಿಸತಕ್ಕದ್ದು.
5. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ರೀತಿ ನಿರ್ಬಂಧಿಸತಕ್ಕದ್ದಲ್ಲ.
6. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
7. ಈ ಅನುಮೋದಿತ ವಿನ್ಯಾಸಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
8. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲಿನ ನೀರನ್ನು ಬಿಡಬಾರದು.
9. ರಿಯಲ್‌ಎಸ್ಟೇಟ್ (ವಿನಮಯ ಮತ್ತು ಅಭಿವೃದ್ಧಿ) ಅಧಿನಿಯಮ 2016ರ (2016ರ ಕೇಂದ್ರ ಅಧಿನಿಯಮ16) ಅಡಿಯಲ್ಲಿ ಯೋಜನೆಯನ್ನು ನೋಂದಾಯಿಸತಕ್ಕದ್ದು.
10. ವಿನ್ಯಾಸವನ್ನು ಸರ್ವೆ ನಕ್ಷೆಯ ಆಧಾರದ ಮೇಲೆ ತಯಾರಿಸಲಾಗಿದ್ದು, ವಿನ್ಯಾಸದ ಎಲ್ಲೆ ಹಾಗೂ ಅನಿಯತ ನಿವೇಶನಗಳ ಅಂತಿಮ ಅಳತೆಗಳನ್ನು ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿದ ನಂತರ ನಿರ್ಧರಿಸುವುದು.

--5

11. ಸದರಿ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಗೇಟ್‌ಅನ್ನು ಅಳವಡಿಸಿ **"ಗೇಟೆಡ್ ಕಮ್ಯೂನಿಟಿ"** ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಹಾಗೂ ಸದರಿ ವಿನ್ಯಾಸದಲ್ಲಿನ ರಸ್ತೆ, ಪಾದಚಾರಿ ಮಾರ್ಗ ಹಾಗೂ ಉದ್ಯಾನವನಗಳ ಸಾರ್ವಜನಿಕ ಸ್ವತ್ತಾಗಿರುತ್ತದೆ ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.
12. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಈ ಪ್ರಾಧಿಕಾರದ ನಕ್ಷೆ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
13. ಅನಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದನೆ ಸಂಖ್ಯೆ ಮತ್ತು ದಿನಾಂಕದೊಂದಿಗೆ ಸಾರ್ವಜನಿಕರ ವೀಕ್ಷಣೆಗಾಗಿ ಸ್ಥಳದಲ್ಲಿ ನಾಮಫಲಕದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
14. ವಿನ್ಯಾಸದ ಅನುಮೋದನೆಯಲ್ಲಿ ವಿಧಿಸಿರುವ ಯಾವುದೇ ಷರತ್ತುಗಳನ್ನು ಹಾಗೂ ಕಾಲಕಾಲಕ್ಕೆ ವಿಧಿಸುವ ಇತರೆ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.
15. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂ-ಮಾಲಿಕತ್ವ ದಾಖಲೆ ಮತ್ತು ಇತರೆ ಯಾವುದೇ ದಾಖಲೆ/ಮಾಹಿತಿಗಳು ಸುಳ್ಳಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇತಾನಾಗಿ ರದ್ದುಗೊಳ್ಳುತ್ತದೆ.
16. ಈ ಅನುಮೋದಿತ ವಸತಿ ವಿನ್ಯಾಸ ನಕ್ಷೆ ಪ್ರದೇಶದಲ್ಲಿ ಬರುವ 'ಬ'ಖರಾಬು ಜಮೀನುಗಳನ್ನು ಸರ್ಕಾರಕ್ಕೆ ಸೇರಿರುತ್ತದೆ. ಈ ಜಮೀನುಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು ಹಾಗೂ ಅತಿಕ್ರಮಣ ಮಾಡಬಾರದು ಮತ್ತು ಇತರೆ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದಲ್ಲ.
17. ಬಿಡುಗಡೆ ಮಾಡಿರುವ ನಿವೇಶನಗಳ ವಿವರಗಳು.

ಕ್ರ.ಸಂ.	ಅಳತೆ	ನಿವೇಶನಗಳ ಸಂಖ್ಯೆ	ಒಟ್ಟು
1.	9.14ಮೀ x 12.19ಮೀ	2, 3, 4, 5, 6.	05
2.	ಅನಿಯತ	1, 7, 8, 9.	04
		ಒಟ್ಟು	**09**

ಸಹಿ/-

ಆಯುಕ್ತರು,
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಬಳ್ಳಾಪುರ.


ಪ್ರತಿಯನ್ನು:

1) ಶ್ರೀ ರಾಜರಾಮ್ ಬಿನ್ ನರಸಿಂಹಮೂರ್ತಿ, ನಂ.65, 100ಅಡಿ ರಸ್ತೆ, ಎಂ.ಟಿ.ಎಸ್.ಬಡಾವಣೆ, ಕೆಂಗೇರಿ ಉಪನಗರ, ಬೆಂಗಳೂರು-60. ಇವರ ಮಾಹಿತಿಗಾಗಿ ನೀಡಲಾಗಿದೆ.
2) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಗಲಗುರ್ಕಿ ಗ್ರಾಮ ಪಂಚಾಯಿತಿ ಚಿಕ್ಕಬಳ್ಳಾಪುರ ತಾಲ್ಲೂಕು ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3) ಜಿಲ್ಲಾ ನೋಂದಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಉಪನೋಂದಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
5) ಕಛೇರಿ ಕಡತಕ್ಕೆ.

ಆಯುಕ್ತರು, 15/03/2024

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಬಳ್ಳಾಪುರ

O/C




ಕ್ರ.ಸಂ	ಸ.ನಂ	ಒಟ್ಟು ವಿಸ್ತೀರ್ಣ	ಖರಾಬು	ಉಳಿಕೆ ವಿಸ್ತೀರ್ಣ	ಭೂ.ಪ ವಿಸ್ತೀರ್ಣ	ಭೂ.ಪ ಆದೇಶ ಸಂಖ್ಯೆ
01	150/11	0–10.04	00	0–10.04	0–10.04	ಎಎಲ್‌ಎನ್‌ಎಸ್‌ಆರ್. (ಚಿ)ಸಕಾಲ.263/2014–15 ದಿನಾಂಕ:26/02/2015
02	150/12	0–10.04	00	0–10.04	0–10.04	ಎಎಲ್‌ಎನ್‌ಎಸ್‌ಆರ್. (ಚಿ)ಸಕಾಲ.264/2014–15 ದಿನಾಂಕ:26/02/2015

ಸೂಚನೆ:–

1. ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿರುವ ಸರ್ವೆ ನಕ್ಷೆಗೆ ಅನುಗುಣವಾಗಿ ವಿನ್ಯಾಸ ನಕ್ಷೆಯನ್ನು ತಯಾರಿಸಲಾಗಿದೆ. ಸದರಿ ಸರ್ವೆ ನಕ್ಷೆಯಲ್ಲಿನ ನ್ಯೂನತೆಗಳಿಗೆ ಈ ಇಲಾಖೆಯು ಯಾವುದೇ ಜವಾಬ್ದಾರಿ ಇರುವುದಿಲ್ಲ.
2. ಸದರಿ ಜಮೀನು ಯಾವುದೇ ತಂಟೆ ತಕರಾರುಗಳಿಗೆ ಅರ್ಜಿದಾರರೇ ಹೊಣೆಗಾರರಾಗಿದ್ದು, ಈ ಇಲಾಖೆಗೆ ಯಾವುದೇ ರೀತಿಯ ಜವಾಬ್ದಾರಿಯಾಗಿರುವುದಿಲ್ಲ.

ಸ್ಥಳ ಸೂಚಿ ನಕ್ಷೆ(ಮಾಪನಕ್ಕಿಲ್ಲ)



ಪ್ರಸ್ತಾವಿತ ಪ್ರದೇಶದ ಒಟ್ಟು ವಿಸ್ತೀರ್ಣ – 2073.98 ಚ.ಮೀ ಅಥವಾ 0ಎಕರೆ–20.08ಗುಂಟೆ
ಖರಾಬು ವಿಸ್ತೀರ್ಣ – 000000 ಚ.ಮೀ ಅಥವಾ 0ಎಕರೆ–00ಗುಂಟೆ
ಅನ್ಯಕ್ರಾಂತ ವಿಸ್ತೀರ್ಣ – 2073.98 ಚ.ಮೀ ಅಥವಾ 0ಎಕರೆ–20.08ಗುಂಟೆ
ಉಳ್ಳವರುವ ವಿಸ್ತೀರ್ಣ– 2073.98 ಚ.ಮೀ ಅಥವಾ 0ಎಕರೆ–20.08ಗುಂಟೆ

ಭೂ–ಉಪಯೋಗ ವಿಶ್ಲೇಷಣೆ

ಕ್ರ.ಸಂ.	ಭೂ–ಉಪಯೋಗ	ವಿಸ್ತೀರ್ಣ(ಚ.ಮೀ)	ಶೇಖಡ (%)
01	ವಸತಿ	987.75	47.62
02	ಉದ್ಯಾನವನ	312.09	15.05
03	ರಸ್ತೆ	774.14	37.33
	ಒಟ್ಟು	2073.98	100.00

ಈ ಪ್ರಾಧಿಕಾರದ ಪತ್ರ ಸಂಖ್ಯೆ:ಚಿನಅಪ್ರಾ:ಎನ್ಯಾಸ:12/2022–23 ದಿನಾಂಕ:3-11-2023ರಲ್ಲಿ ನಮೂದಿಸಿದ ನಿಬಂಧನೆಗಳಿಗೆ ಒಳಪಟ್ಟು ಕರಡು ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಿದೆ

ನಿವೇಶನದ ವಿವರ

ಕ್ರ.ಸಂ.	ನಿವೇಶನದ ಅಳತೆ	ನಿವೇಶನಗಳ ಸಂಖ್ಯೆ
01	9.14ಮೀ x12.19ಮೀ	04
02	ಅನಿಯತ (*)	03
	ಒಟ್ಟು	07

ಕರ್ನಾಟಕ ಸರ್ಕಾರ

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,

ಚಿಕ್ಕಬಳ್ಳಾಪುರ.

03/11/2023
ನಗರ ಯೋಜಕ ಸದಸ್ಯರು
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ

03/11/2023
ಆಯುಕ್ತರು
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ

ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕು ನಂದಿ ಹೋಬಳಿ ಅಗಲಗುರ್ಕಿ ಗ್ರಾಮದ ಸ.ನಂ.150/11 ರಲ್ಲಿ 0ಎ–10.04ಗುಂಟೆ ಮತ್ತು ಸ.ನಂ.150/12 ರಲ್ಲಿ 0ಎ–10.04ಗುಂಟೆ ಒಟ್ಟು 0ಎ–20.08ಗುಂಟೆ ವಿಸ್ತೀರ್ಣದ ಭೂಪರಿವರ್ತಿತ ಪ್ರದೇಶಕ್ಕೆ ರಚಿಸಲಾದ ಕರಡು ವಸತಿ ವಿನ್ಯಾಸ ನಕ್ಷೆ.

ಅರ್ಜಿದಾರರು: ಶ್ರೀ ರಾಜಾರಾಮ್ ಬಿನ್ ನರಸಿಂಹ ಮೂರ್ತಿ

ಅಳತೆ:–1:500

ನಕ್ಷೆ ಸಂಖ್ಯೆ: /2023–24